International Journal of Kannada Research
www.kannadajournal.com

ISSN: 2454–5813
IJKR 2021; 7(1): 29-30
© 2021 IJKR
www.kannadajournal.com
Received: 22-11-2020
Accepted: 24-12-2020

**ಶೈಲೇಶಕುಮಾರ ಕ್ಷೇಮಲಿಂಗ**
ಕನ್ನಡ ಸಂಶೋಧನ ವಿದ್ಯಾರ್ಥಿ
ಗುಲಬರ್ಗಾ ವಿಶ್ವವಿದ್ಯಾಲಯ,
ಕಲಬುರಗಿ

**Corresponding Author:**
**ಶೈಲೇಶಕುಮಾರ ಕ್ಷೇಮಲಿಂಗ**
ಕನ್ನಡ ಸಂಶೋಧನ ವಿದ್ಯಾರ್ಥಿ
ಗುಲಬರ್ಗಾ ವಿಶ್ವವಿದ್ಯಾಲಯ,
ಕಲಬುರಗಿ

# ವೃತ್ತಿ ರಂಗಭೂಮಿಯ ಒಂದು ನೋಟ

**ಶೈಲೇಶಕುಮಾರ ಕ್ಷೇಮಲಿಂಗ**

ನಾಟಕ ಎಂಬ ಮಾತು ಕನ್ನಡ ನಾಡಿನಲ್ಲಿ ತುಂಬಾ ಹಳೆಯದು, ಗೋವಿಂದ ವೈದ್ಯ, ರತ್ನಾಕರವರ್ಣಿಗಳ ಕೃತಿಗಳಲ್ಲಿ ನಾಟಕ ಎಂಬ ಪದವೂ, ನಾಟಕದ ವರ್ಣನೆಯೂ ಕಂಡುಬರುತ್ತದೆ. 17ನೆಯ ಶತಮಾನದ ಆದಿಭಾಗದಲ್ಲಿದ್ದ ಭಟ್ಟಾಕಳಂಕ "ಕಾವ್ಯ ನಾಟಕಾಲಂಕಾರ ಕಬಾಶಾಸ್ತ್ರ ವಿಷಯಾಗಾಂಚ ಬಹೂನಾಂ ಗ್ರಂಥನಾಮಪಿ" ಎಂದು ಬರೆದಿದ್ದಾನೆ. ಕುಮಾರವ್ಯಾಸ ಕವಿ ನಾಟಕ ಎಂಬ ಮಾತನ್ನು ಅನೇಕ ಕಡೆಗಳಲ್ಲಿ ಉಪಯೋಗಿಸಿದ್ದಾನೆ. ಬಸವ ಪುರಾಣವನ್ನು ರಚಿಸಿದ ಭೀಮ ಕವಿ "ಶ್ರಿಂಗಾರಗೊಂಡು ಒಡವೆಗಳಿಂದ ಅಲಂಕೃತವಾಗಿ ನಾಟಕಕ್ಕಳವಟ್ಟು ರೀತಿಯೊಳೋಟ್ಟ ನಡೆತಂದ ಚದುರೆ" ಸೋಮಲದೇವಿಯನ್ನು ವರ್ಣಿಸಿದ್ದಾನೆ. ಶ್ರಿಂಗಾರ ರತ್ನಾಕರವನ್ನು ರಚಿಸಿದ ಕವಿ ಕಾಮದೇವನೂ ನಾಟಕ ಬಗ್ಗೆ ನುಡಿದಿದ್ದಾನೆ. ಮಹಾದೇವಿ ರೂಪದೇವಿ ಎಂಬ ರಾಣಿಯರು ಸೀತೆ ರಾಮರಾಗಿ ಕೃತಕ ನಾಟಕವನ್ನಾಡಿದ ರೀತಿಯನ್ನು ಪಂಚತಂತ್ರ ಕೃತಿಕಾರ ದುರ್ಗಸಿಂಹ ತಿಳಿಸಿದ್ದಾನೆ. ಹೆಸರಾಂತ ಹೊಯ್ಸಳದೊರೆ ವೀರಬಲ್ಲಾಳ ಕಲಾವಂತನಾದ ನಟನಾಗಿದ್ದನೆಂದು ಸೊರಬದ ಶಿಲಾಶಾಸನದಲ್ಲಿ (1208) ಹೇಳಿದೆ. ನೀಲಾಂಜನೆಯ ನಾಟಕ ಮಾಡಿದದರ ಬಣ್ಣನೆ ಪಂಪನ ಆದಿಪುರಾಣದಲ್ಲಿದೆ. ಪೊನ್ನಕವಿ ತನ್ನ 'ಶಾಂತಿಪುರಾಣ'ದಲ್ಲಿ ಚಂದ್ರೋದಯವನ್ನು ನಾಟಕಾರಂಭಕ್ಕೆ ಹೋಲಿಸುತ್ತಾ ನಕ್ಷತ್ರಗಳು ಸಊತ್ರದಾರ ಪ್ರಸಿದ್ಧ ಪುಷ್ಪಕಗಳೆಂದು ಸರಿದು ಹೋಗುತ್ತಿರುವ ಕತ್ತಲೆಯ ಮೇಲೇರುತ್ತಿರುವ ತೆರೆಯೊಂದೂ ರಾತ್ರಿಯ ನಾಲ್ಕು ಪ್ರಹರಗಳು ನಾಟಕದ ನಾಲ್ಕು ಅಂಕಗಳು ಎಂದು ವರ್ಣಿಸಿದ್ದಾನೆ.
ಅಜಿತ ಉರಾಣದ ಕರ್ತೃ ರನ್ನ ಕವಿಯ ಕಾವ್ಯದಲ್ಲಿ ನಾಟಕವಿಧಿಯ ವಿವರಣೆಯನ್ನು ನೋಡಬಹುದು. ನಾಟಕವೆಂಬ ಹೆಸರಿನ ಮನೋರಂಜನೆಯು ಕನ್ನಡ ನಾಡಿನಲ್ಲಿ 10ನೇಯ ಶತಮಾನದಿಂದ ಇದ್ದಿತೆಂದು ನಂಬಲು ಇವೆಲ್ಲ ಆಧಾರಗಳುಂಟು.
ವೃತ್ತಿನಿರತ ರಂಗಭೂಮಿ ಕಲಿತವರ ಮನೋರಂಜನೆಯ ಸಲುವಾಗಿ ಸಂಸ್ಕೃತ ನಾಟಕಗಳನ್ನು ಆಧಾರವಾಗಿಟ್ಟುಕೊಂಡಿದ್ದ ಅರಮನೆ ರಂಗಭೂಮಿಗೂ, ಕಲಿಯದವರ ಮನೋರಂಜನೆ ಮಾಡುತ್ತಿದ್ದ ಜಾನಪದ ರಂಗಭೂಮಿಗೂ ನಡುವೆ ಜನಸಾಮಾನ್ಯರ ಎಂದರೆ ಮಧ್ಯಮ ವರ್ಗದ ಜನತೆಯನ್ನು ರಂಜಿಸುವ ಉದ್ದೇಯದಿಂದ ಹುಟ್ಟಿದುದೆ ವೃತ್ತಿನಿರತ ರಂಗಭೂಮಿ. ಭಾರತದಲ್ಲಿ ಇದರ ಬೆಳವಣಿಗೆಯಾಗಿರುವುದು ಕಳೆದ ಸುಮಾರು 150 ವರ್ಷಗಳ ಕಾಲದಲ್ಲಿ ಅಷ್ಟೆ. ಪಾಶ್ಚಾತ್ಯ ಸಂಪರ್ಕದಿಂದಾಗಿ ರಂಗಕಲೆಯ ಬಗ್ಗೆ ಜನರಲ್ಲಿ ಬಂದ ಹೊಸ ಅರಿವು ಭಾರತದ ವೃತ್ತಿ ರಂಗಭೂಮಿಯ ಸ್ಥಾಪನೆಗೆ ಪ್ರಚೋದನೆ ಕೊಟ್ಟಿತ್ತು. ಕಲೆಯನ್ನೇ ಕಾಯಕವಾಗಿ ಮಾಡಿಕೊಂಡಿದ್ದ ಈ ರಂಗ ಭೂಮಿ 1775–76ರಲ್ಲಿ ಮೊದಲಿಗೆ ಕಲ್ಕತ್ತಾದಲ್ಲಿ ಪ್ರಾರಂಭವಾಯಿತು. ಇದರ ಪ್ರಭಾವದಿಂದ 1842ರ ಹೊತ್ತಿಗೆ ಮುಂಬಯಿಯಲ್ಲಿ ಬಾಡಿಗೆಗೆ ಕೊಡಮಾಡುವ ರಂಗಶಾಲೆಗಳನ್ನು ನಿರ್ಮಿಸಲಾಯಿತು. 30 ವರ್ಷಗಳ ಅನಂತರ ಪಾರ್ಸಿ ಕಂಪನಿಯೊಂದು ಮೈಸ್ರರಿಗೆ ಭೆಟಿಯಾಯತು. ನಾಟಕಗಳನ್ನು ಪ್ರದರ್ಶಿಸಿದ ಮೇಲೆ ಕನ್ನಡ ನಾಡಿನಲ್ಲಿ ವಋತ್ತಿನಿರತ ರಂಗಭೂಮಿಯ ಅವತಾರವಾಯಿತೆನ್ನಬೇಕು. ಉತ್ತರ ಕರ್ನಾಟಕ ರಂಗಭೂಮಿ ; ಕರ್ನಾಟಕ ರಂಗಭೂಮಿಯ ಸ್ಥೂಲನೋಟಕ್ಕೆ ಪ್ರಾದೇಶಿಕ ಒಳವೈವಿಧ್ಯಗಳು ಅಷ್ಟಾಗಿ ಕಾಣಿಸಲಿಕ್ಕಿಲ್ಲ. ಕಾರಣ ಯಾವುದೇ ಕಲೆಯ ಸೂಕ್ತ ನೆಲೆಗಳನ್ನು ಪರಿಚಯಿಸಿಕೊಳ್ಳಬೇಕಾದರೆ ಪ್ರಾದೇಶಿಕವಾದ ಕೇಂದ್ರಗಳತ್ತಲೇ ನಮ್ಮ ದೃಷ್ಟಿ ಹರಿಸಬೇಕಾಗುತ್ತದೆ. ಈ ರೀತಿಯ ಚಲನೆಯಿರದ ಕರ್ನಾಟಕದ ಕರಾವಳಿಯ ಮಲೆನಾಡಿನ ಬಯಲು ಸೀಮೆಯ ಸೊಗಸುಗಳು ಕಣ್ಣಿಗೆ ಕಟ್ಟುತ್ತವೆ. ಆಯಾ ಮಣಿನ ಗುಣಗಳು ಅಲ್ಲಲ್ಲಿಯ ಕಲೆಗಳನ್ನು ಸಂಸ್ಕೃತಿಯನ್ನು ಹೇಗೆ ರೂಪಿಸಿವೆ! ಹೇಗೆ ಬೆಳೆಸಿದೆ ಎಂಬುದನ್ನು ನೋಡಲು ಇದರಿಂದ ಅನುಕೂಲವಾಗುತ್ತದೆ. ಈ ಹಿನ್ನಲೆಯಲ್ಲಿ ಉತ್ತರ ಕರ್ನಾಟಕ ರಂಗಭೂಮಿಗಿರುವ ವೈವಿಧ್ಯತೆ, ವಿಶಿಷ ತೆಯನ್ನು ಪರಿಚಯಿಸಿಕೊಳ್ಳೋಣ.

ಇಲ್ಲಿಯ ಯಕ್ಷಗಾನ, ಮೂಡಲಪಾಯ, ದೊಡ್ಡಾಟಗಳಿಗೆ 500–600 ವರ್ಷಗಳಿಗಿಂತಲೂ ಸುದೀರ್ಘವಾದ ಚರಿತ್ರೆ ಇದೆ. ಒಂದು ಕಾಲದಲ್ಲಿ ಬಯಲಿನಲ್ಲಿ ನಡೆಯುತ್ತಿದ್ದ ಬಯಲಾಟಗಳನ್ನು ನೋಡುವುದೇ ಈ ಭಾಗದ ಜನರಿಗೆ ಹಬ್ಬವಾಗಿತ್ತು. 1960–70ರ ದಶಕದಲ್ಲಿ ಬೆಳಗಾವಿ ಮತ್ತು ಧಾರವಾಡದ ಪರಿಸರದಲ್ಲಿ ನಡೆದ ರಂಗ ಪ್ರಯೋಗಗಳು ಹಾಗೂ ಆಧುನಿಕ ರಂಗಭೂಮಿಯನ್ನು ಕಟ್ಟಲು ನಡೆಸಿದ ಪ್ರಯತ್ನಗಳು ನಾಡಿನ ಚ್ವರಿತ್ರೆಯಲ್ಲೇ ಗಮನಾರ್ಹವೆನಿಸಿದೆ. ಕುಲಗೋಡ ತಮ್ಮಣ್ಣನ 'ಶ್ರೀ ಕೃಷ್ಣ ಪಾರಿಜಾತ' ಬಸರನಿಕಂಬಾರನ 'ರಾಧಾನಾಟ' ಬೈಲವಾಡ ಪತ್ತಾರನ ಸಂಗ್ಯಾ–ಬಾಳ್ಯಾ, ಚುರುಮುರಿ, ಶೇಷತಿರಿರಾಯರ ಶಾಕುಂತಲದ ಅನುವಾದ, ಹೆಲನಿ ವಿದ್ಯಾಮಂಡಲದ ವಿದ್ಯಾರ್ಥಿ ಬಳಗ ಪ್ರದರ್ಶಿಸಿದ ಕಂಪನಿ ಶೈಲಿಯ ನಾಟಕಗಳು, ಶಾಂತಕವಿಗಳ ಕರ್ನಾಟಕ ನಾಟಕ ಮಂಡಳಿಯ ಸಂಘಟನೆ ಇವೆಲ್ಲವೂ ಗಂಭೂಮಿಯ ಚ್ವರಿತ್ರೆಯ ಮಹತ್ವ ಮೈಲುಗಲ್ಲುಗಳು.

ಕ್ರಿ.ಶ. 1872 ರ ಹಿಂದೆಯೇ ಕನ್ನಡದ ದಾಸಯ್ಯನೆಚಿದೇ ಖ್ಯಾತನಾಮರಾದ ಶಾಂತಕವಿ ಕಾವ್ಯನಾಮದ ಸಕರಿ ಬಾಳಾಚಾರ್ಯರು ಕರ್ನಾಟಕ ರೈತಪರ ನಾಟಕ ಮಂಡಳಿ ಹೆಸರಿನ ಮೊದಲ ವೃತ್ತಿ ನಾಟಕ ಕಂಪನಿ ಸ್ಥಾಪಿಸಿದರು. ಅದಕ್ಕೂ ಮೊದಲೇ ಪಾರ್ಸಿ ಮೂಲದಿಂದ ಬಂದಿರುವ ನಾಟಕಗಳು ಕನ್ನಡದ ದೇಸಿ ನೇಟಿವಿಟಿಗಳೊಂದಿಗೆ ಅಲ್ಲಲ್ಲೆ ಅಂದರೆ ವ್ಮರಾಠಿಗರಿಂದ ದಕ್ಷಿಣ ಮಹಾರಾಷ್ಟ್ರವೆಂದು ಆಗ ಕರೆಯಲ್ಪಡುತ್ತಿದ್ದ ಮುಂಬೈ ಕರ್ನಾಟಕ ಪ್ರಾಂತ್ಯಗಳಲ್ಲಿ ಪ್ರಚಲಿತವಾಗಿದ್ದವು.

ಸ್ವಾತಂತ್ರ ಹೋರಾಟದ ಸಂದರ್ಭದಲ್ಲಿ ರಾಷ್ಟ್ರೀಯತೆ ಮೆರೆಯುವಲ್ಲಿ ದೇಶಭಕ್ತಿ, ದೈವಭಕ್ತಿ, ಉಕ್ಕಿಸುವಲ್ಲಿ ಅವಿಭಕ್ತ ಕುಟುಂಬ ಪ್ರೀತಿಯ ಕಿಚ್ಚು ಹಚ್ಚಿಸಿದ ಗಾಂಧೀ ಪ್ರಣೀತ ಖಾದಿ ಪ್ರೇಮ ಹುಟ್ಟಿಸಿದ ಸದಾಭಿರುಚಿ ಪ್ರೇಕ್ಷಕ ಪರಂಪರೆಯ ಪ್ರೀತಿ ಹುಟ್ಟಿಸಿದ ಕೀರ್ತಿ ವೃತ್ತಿ ರಂಗಭೂಮಿಗೆ ಸಲ್ಲುತ್ತದೆ.

ನವೋದಯ ಸಾಹಿತಿಗಳ ಪ್ರೀತಿಗೆ ಪಾತ್ರವಾದ ಬಹುದೊಡ್ಡ ರಂಗ ಸಾಹಿತ್ಯ ಮಾಧ್ಯಮ ಇದಾಗಿತ್ತು. ಒಂದೊಂದು ನಾಟಕ ಕಂಪನಿಯಲ್ಲಿ ಸಾಂಸ್ಕೃತಿಕ ವಿಶ್ವವಿದ್ಯಾಲಯದಂತೆ ಅಕ್ಷರಶಃ ಸಾಂಸ್ಕೃತಿಕ ಕೃಂಕರ್ಯ ಮೆರೆದಿವೆ. ಪ್ರಯೋಗಶೀಲತೆಯ ದೃಷ್ಟಿಯಿಂದಲು ಇವತ್ತಿನ ರೆಪರ್ಟರಿಗಳಷ್ಟೆ ಪಾಚಿಡಿತ್ಯ ಹೊಂದಿದ್ದವೆಂಬುದನ್ನು ಅಲ್ಲಗಳೆಯಲಾಗದು. ಮಾಷ್ಟರ ಹಿರಣಯ್ಯ, ಬಿ.ಓಬಳೇಶ, ಧೀರೇಂದ್ರ ಗೋಪಾಲ ಮುಂತಾದವರ ವಿರೋಧ ಪಕ್ಷಗಳಂತೆ ಜನಪರ ಕಾಳಜಿಯ ಎಚ್ಚರ ಮೂಡಿಸುವ ಸಾಂಸ್ಕೃತಿಕ ಆಯುಧಗಳಾಗಿ ಸರ್ಕಾರಕ್ಕೆ ಚುರುಕು ಮುಟ್ಟಿಸಿದ್ದಾರೆ.

ಬೃಹತ್ತಾದ ಜಾಗದಲ್ಲಿ ಗಮನಿಸುವ ರಂಗಸಜ್ಜತೆ ರಂಗದ ಪರದೆ, ಕವಾಟು ರಂಗ ಪರಿಕರಗಳು ನಿರ್ಮಿಸಿ ಅಂತಹ ವರ್ಣ ಲಾವಣ್ಯಮಯ ವೇದಿಕೆಯಲ್ಲಿ ಸಂಭ್ರಮದ ಕಣ್ಮನಗಳ ಲೋಕದೆದರು ಪ್ರದರ್ಶಿಸಲ್ಪಡುವ ರಂಗನಾಟಕಗಳ ಸಂಸ್ಕೃತಿಯನ್ನು ಸಾರ್ವತ್ರಿಕವಾಗಿ ಬೆಳೆಸಿರುವ ಪ್ರಜಾಸತ್ತಾತ್ಮಕ ರಂಗಪರಂಪರೆ ಇದು.

ಅಂತೆಯೇ ಇವತ್ತಿಗೂ ಹಳ್ಳಿ ಹಳ್ಳಿಗಳಲ್ಲೂ ಜನರೇ ನಾಟಕ ಬರೆದು ತಾವೆ ಪಾತ್ರವಹಿಸಿ ನಿರ್ದೇಶಿಸಿ ಲಕ್ಷಗಟ್ಟಲೆ ಹಣ ಖರ್ಚು ಮಾಡಿ, ತಿಂಗಳುಗಟ್ಟಲೆ ತಾಲೀಮು ನಡೆಸಿ ಬಂದ ಆಪ್ತ ಸಾಂಸ್ಕೃತಿಕ ಪರಿಸರದಲ್ಲಿ ಬಹುಪಾಲು ಅನಕ್ಷರಸ್ಥರೇ ಆಡುವ ಜವಾರಿ ಸಡಗರದ ನಾಟಕಗಳೆಲ್ಲವೂ ವೃತ್ತಿ ರಂಗಭೂಮಿ ನಾಟಕಗಳೆ. ಅಪ್ಪಿತಪ್ಪಿಯೂ ಅವರು ಆಧುನಿಕ ರಂಗಭೂಮಿ ನಾಟಕಗಳನ್ನು ಆಡುವುದಿಲ್ಲ. ಅಂತೆಯೇ ವೃತ್ತಿ ರಂಗಭೂಮಿ ಇವತ್ತಿಗೂ ಜನಸಾಮಾನ್ಯರ ರಂಗಭೂಮಿ.

ನಟ–ನಟಿ ಪರಂಪರೆ, ರಂಗ ಸಂಗೀತ ಪರಂಪರೆ, ರಂಗ ಸಜ್ಜಿಕೆ ಪರಂಪರೆ ಇಲ್ಲಿ ವೃತ್ತಿ ರಂಗಭೂಮಿಯ ಭೂಮತ್ವ ಹೆಚ್ಚಿಸಿದೆ ಮುಖ್ಯವಾದ ಸಾಂಸ್ಕೃತಿಕ ಪರಂಪರೆಗಳು ಮಾನ್ವಿ ಅದೃಶ್ಯಪ್ಪನ ಭೀಮನ ಪಾತ್ರ, ತೀರ್ಥಹಳ್ಳಿ ಶಾಂತಕುಮಾರ ಅದರ ಮೀರ ಸಾಧಿಕ ಪಾತ್ರ ಕುರದಾಸರ ಸುಮಿತ್ರಮ್ಮರ ಆಚಿಜನೇಯನ ಪಾತ್ರ ನೋಡಲೇಬೇಕೆಂದು ಪ್ರೇಕ್ಷಕರ ನೂಕುನುಗ್ಗಲು ಇವತ್ತಿಗೂ, ಸುಭದ್ರಮ್ಮನವರ ರಂಗ ಸಂಗೀತವೆಂದರೆ ಸಂಭ್ರಮ ದ್ವಿಗುಣ.

ತೊಂಬತ್ತರ ಪ್ರಾಯದ ಪರಮಶಿವನು ಅವರ ಹಾರ್ಮೋನಿಯಂ ಸಾಧಿಯ ವೃತ್ತ, ಕಂದ, ಸೀಸ ಪದ್ಯ ಕೇಳಲು ಮೈಯಲ್ಲ ಕಿವಿಯಾಗಿಸಿಕೊಳ್ಳುವ ಪುಳಕ ಶಿರಹಟ್ಟಿ ವೆಂಕೋಬರಾಯರ ಗುಬ್ಬಿವೀರಣ್ಣನವರ ನಾಟಕ ಕಂಪನಿ ಸಾಮಾನು ಸರಂಜಾಮುಗಳು ರೈಲ್ವೆ–ವ್ಯಾಗನಗಳಲ್ಲಿ ತುಂಬಿ ಬರುತ್ತಿದ್ದವು. ಸ್ಟೇಜ ಮೇಲೆ ಕುದುರೆ, ಜಿಂಕೆ, ಪಾರಿವಾಳ, ಮೊಲ, ನವಿಲುಗಳು, ಮಿನಿ ಸರ್ಕಸ್ ಕಂಪನಿಯೇ ಬಂದಿಳಿದ ಸಂಭ್ರಮ, ಎಡೆಯೂರು ಸಿದ್ಧಲಿಂಗೇಶ್ವರ, ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ ಮಹಾತ್ಮೆ ನಾಟಕಗಳನ್ನು ನೋಡುವ ಎರಡು ಕಣ್ಣುಗಳ ಸಡಗರ ಹೇಳತೀರದು.

ಇಂತಹ ವೈಶಿಷ್ಟ್ಯ ಮೆರೆದ ಮೇರು ಸಂಸ್ಕೃತಿಯ ಪೌರಾಣಿಕ, ಐತಿಹಾಸಿಕ ನಾಟಕಗಳು ಕ್ಷಣ್ಮರೆಯಾಗಿವೆ. ಅಷ್ಟೇ ಯಾಕೆ ಅವಿಭಿಜಿತ ಕುಟುಂಬ ಪ್ರೀತಿಯ ಸಾಮಾಜಿಕ ನಾಟಕ ಪರಂಪರೆಗಳ ಸಾಂಸ್ಕೃತಿಕ ಕೊಂಡಿಯೂ ಕಳಚಿ ಬಿದ್ದಿವೆ. ನ್ಯೂಕ್ಲಿಯರ್ ಕುಟುಂಬದ ಕತೆಗಳೂ ಇಲ್ಲ ಅವುಗಳ ಜಾಗದಲ್ಲಿ ಹಾಸ್ಯದ ಹೆಸರಿನ ದ್ವಂದ್ವಾರ್ಥ ನಾಟಕಗಳ ಸಂಸ್ಕೃತಿಯದೆ ಮೇಲುಗೈ. ಈ ಬಗೆಯ ನಾಟಕಗಳಿಗೆ ರಿಯಾಲಿಟಿ ಶೋ ಮತ್ತು ಸಿನಿಮಾ ಕಿರುತೆರೆಗಳ ಅಗ್ಗಾದ ಪ್ರಭಾವ ಡಾ. ರಾಜಕುಮಾರರಂತಹ ಮೇರು ನಟರು ವೃತ್ತಿರಂಗ ಪರಂಪರೆಯವರೆಂಬ ಸ್ಮರಣೆ ವಿಸ್ಮೃತಿಗೆ ಸ್ಥೆರಿದಂತಾಗಿದೆ.

ಆಧುನಿಕ ರಂಗಭೂಮಿ ತನ್ನಲ್ಲಿ ಬದ್ಧತೆಗಳ ನಡುವೆಯೂ ಜನಪ್ರೀಯತೆಯ ನೆಲೆಯಲ್ಲಿ ತೀವ್ರ ಕೆಳಮುಖವನ್ನು ಅನುಭವಿಸುತ್ತಿದೆ. ರಂಗಭೂಮಿಯ ಸಾಮಾಜಿಕ ಅವಶ್ಯಕತೆಯನ್ನು ಮನಗಂಡು ರಂಗತಜ್ಞರು ರಂಗಭೂಮಿಯನ್ನು ಮತ್ತೆ ಜನರ ಅವಶ್ಯಕತೆಯನ್ನಾಗಿ ಮಾಡುವ ತೀವ್ರ ಪ್ರಯತ್ನದಲ್ಲಿದ್ದಾರೆ. ವರ್ತಮಾನದ ಗಾಯಗಳಿಗೆ ಗತಕಾಲದಲ್ಲಿ ಉಪಚಾರ ದೊರೆಯಬಹುದೇನೋ ಎಂಬ ಆಸೆ ಸಹಜವಾದದು. ಹಾಗಾಗಿ ಒಮ್ಮೆ ಜನಪ್ರೀಯತೆಯ ಉತ್ತುಂಗದಲ್ಲಿದ್ದ ವೃತ್ತಿ ರಂಗಭೂಮಿ ಅಥವಾ ಕಂಪನಿ ನಾಟಕಗಳು ಗೆದ್ದಿರುವ ಕಾರಣಗಳೇನು? ಮತ್ತು ನಾವು ಆಧುನಿಕರು ಸೋಲುತ್ತಿರುವದೆಲ್ಲಿ ಎಂಬುದನ್ನು ಒಟ್ಟೊಟ್ಟಿಗೆ ಇಟ್ಟು ನೋಡುವ ಪ್ರಯತ್ನ ಈ ಲೇಖನದ್ದು.